**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಮಾರುಕಟ್ಟೆ/ಟೆಂಡರ್/160/2015–16 **ದಿನಾಂಕ: 09.04.2015**

**–: *ಸಾರಿಗೆ ವಾಹನಗಳನ್ನು ವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು* ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ :–**

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ "ಕ್ಷೀರಭಾಗ್ಯ" ಯೋಜನೆಯಡಿ (1) ಬೆಂಗಳೂರು, ಚನ್ನರಾಯಪಟ್ನ, ಧಾರವಾಡ, ಶಿವಮೊಗ್ಗ ಪ್ಯಾಕಿಂಗ್ ಕೇಂದ್ರಗಳಿಂದ ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ಹಾಗೂ ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ ಕೆನೆಭರಿತ/ಕೆನೆರಹಿತ ಹಾಲಿನ ಪುಡಿಯನ್ನು (2) ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ತಾಲ್ಲೂಕು ಕೇಂದ್ರಗಳಿಂದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಕೆನೆಭರಿತ ಹಾಲಿನ ಪುಡಿಯನ್ನು (3) ಶಿವಮೊಗ್ಗ ಕೇಂದ್ರ ಡೇರಿಯಿಂದ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಪ್ರತಿ ತಿಂಗಳು ಕೆನೆರಹಿತ / ಕೆನೆಭರಿತ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡಲು ವಿವಿಧ ಸಾಮರ್ಥ್ಯದ ವಾಹನಗಳನ್ನು ವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.inಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು ವಾಹನಗಳನ್ನು ಹೊಂದಿರುವ ಮಾಲಿಕರು/ಸಂಸ್ಥೆಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 20.04.2015 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 08.05.2015 ರಂದು ಸಂಜೆ: 17.30ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: 12.**05.2015** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: 14.**05.2015** ರಂದು ಬೆಳಿಗ್ಗೆ: **11.30** ಗಂಟೆಗೆ |
| 5 | **ಅವಶ್ಯವಿದ್ದಲ್ಲಿ ದರ ಸಂಧಾನ ಮಾಡುವ ದಿನಾಂಕ** | ದಿನಾಂಕ: 16.**05.2015** ರಂದು ಬೆಳಿಗ್ಗೆ: **11.30** ಗಂಟೆಗೆ |

## I. ಕ್ಷೀರ ಭಾಗ್ಯ ಯೋಜನೆಯಡಿಯಲ್ಲಿ ಹಾಲಿನ ಪುಡಿ ಸಾಗಾಣಿಕೆ ವಿವರಗಳು.

**ಎ) ಪ್ಯಾಕಿಂಗ್ ಕೇಂದ್ರಗಳಿಂದ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ / ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ ಈ ಕೆಳಗೆ ನಮೂದಿಸಿರುವ ಮಾರ್ಗಗಳಿಗೆ ಲೋಹದ ಕವಚವನ್ನು ಹೊಂದಿರುವ ಬಾಡಿವುಳ್ಳ 2012ರ ನಂತರದ ಸಾಲಿನ ಕನಿಷ್ಠ 6 ಟನ್ ಸಾಮರ್ಥ್ಯದ ವಾಹನಗಳನ್ನು ಕ್ರ.ಸಂ 1 ರಿಂದ 9 ರವರೆಗೆ ಆರು ತಿಂಗಳು ಹಾಗೂ ಕ್ರಮ.ಸಂಖ್ಯೆ 10 ರಿಂದ 12 ವರೆಗೆ 1 ವರ್ಷದ ಅವಧಿಗೆ ಒದಗಿಸಲು ಗುತ್ತಿಗೆ ಕರೆಯಲಾಗಿದೆ.**

| ಕ್ರ. ಸಂ | ಪ್ಯಾಕಿಂಗ್ ಕೇಂದ್ರಗಳು ಇರುವ ಸ್ಥಳ | ಹಾಲಿನ ಪುಡಿ ಸಾಗಾಣಿಕೆ ಮಾಡಬೇಕಾದ ತಾಲ್ಲೂಕುಗಳ ಹೆಸರು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ ಗಳಲ್ಲಿ | ಮಾಹೆಯಾನ ಅಂದಾಜು ಹಾಲಿನ ಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) | ವಾಹನಗಳ ಸಂಖ್ಯೆ (ಕನಿಷ್ಠ 6 ಟನ್ ಸಾಮರ್ಥ್ಯ) |
|---|---|---|---|---|---|---|
| 1 | ಬೆಂಗಳೂರು | ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 30000 | 1 |
| 2 | ಬೆಂಗಳೂರು | ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 20000 | 1 |
| 3 | ಬೆಂಗಳೂರು | ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 30000 | 1 |
| 4 | ಚನ್ನರಾಯಪಟ್ನ | ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 20000 | 1 |
| 5 | ಚನ್ನರಾಯಪಟ್ನ | ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 20000 | 1 |
| 6 | ಚನ್ನರಾಯಪಟ್ನ | ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 20000 | 1 |
| 7 | ಧಾರವಾಡ | ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 30000 | 1 |
| 8 | ಧಾರವಾಡ | ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 30000 | 1 |
| 9 | ಧಾರವಾಡ | ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 10,000/- | 1,00,000/- | 20000 | 1 |
| 10 | **ಶಿವಮೊಗ್ಗ ಕೇಂದ್ರ ಡೇರಿಯಿಂದ** | ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 20,000/- | 2,00,000/- | 70000 | 2 |
| 11 | **ಶಿವಮೊಗ್ಗ ಕೇಂದ್ರ ಡೇರಿಯಿಂದ** | ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 20,000/- | 2,00,000/- | 70000 | 2 |
| 12 | **ಶಿವಮೊಗ್ಗ ಕೇಂದ್ರ ಡೇರಿಯಿಂದ** | ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 20,000/- | 2,00,000/- | 70000 | 2 |

ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳು :- ಶಿವಮೊಗ್ಗ, ಭದ್ರಾವತಿ, ಸಾಗರ, ಶಿಕಾರಿಪುರ,ಸೊರಬ,ಹೊಸನಗರ, ತೀರ್ಥಹಳ್ಳಿ

ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳು:- ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿ, ಹರಪನಹಳ್ಳಿ, ಜಗಳೂರು

ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳು:- ಚಿತ್ರದುರ್ಗ,ಚಳ್ಳಕೆರೆ,ಹಿರಿಯೂರು,ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗ

**ಬಿ) ಎಲ್ಲ ತಾಲ್ಲೂಕು ಕೇಂದ್ರ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಕೆನೆಭರಿತ ಹಾಲಿನ ಪುಡಿಯನ್ನು ಈ ಕೆಳಕಂಡ ಮಾರ್ಗಗಳಲ್ಲಿ ಸಾಗಾಣಿಕೆ ಮಾಡಲು ಲೋಹದ ಕವಚವನ್ನು ಹೊಂದಿರುವ ಬಾಡಿವುಳ್ಳ 2012ರ ನಂತರದ ಸಾಲಿನ ಕನಿಷ್ಠ 1.5 ಟನ್ ಸಾಮರ್ಥ್ಯದ ವಾಹನಗಳನ್ನು 1 ವರ್ಷದ ಅವಧಿಗೆ ಒದಗಿಸಲು ಗುತ್ತಿಗೆ ಕರೆಯಲಾಗಿದೆ.**

| .ಕ್ರಸಂ | ತಾಲ್ಲೂಕು ಕೇಂದ್ರಗಳು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ ಗಳಲ್ಲಿ | ಶಾಲೆಗಳ ಸಂಖ್ಯೆ (ಅಂದಾಜು) | ಮಾಹೆಯಾನ ಅಂದಾಜು ಹಾಲಿನಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) | ವಾಹನಗಳ ಸಂಖ್ಯೆ (ಕನಿಷ್ಠ 1.5 ಟನ್ ಸಾಮರ್ಥ್ಯ) |
|---|---|---|---|---|---|---|
| 13 | ಶಿವಮೊಗ್ಗ | 10000/– | 100000/– | 428 | 7000 | 02 |
| 14 | ಭದ್ರಾವತಿ | 10000/– | 100000/– | 342 | 6500 | 02 |
| 15 | ಸಾಗರ | 10000/– | 100000/– | 369 | 3500 | 01 |
| 16 | ಶಿಕಾರಿಪುರ | 10000/– | 100000/– | 292 | 5800 | 01 |
| 17 | ಸೊರಬ | 10000/– | 100000/– | 387 | 6300 | 02 |
| 18 | ಹೊಸನಗರ | 10000/– | 100000/– | 252 | 3000 | 01 |
| 19 | ತೀರ್ಥಹಳ್ಳಿ | 10000/– | 100000/– | 275 | 2000 | 01 |
| 20 | ದಾವಣಗೆರೆ | 10000/– | 100000/– | 473 | 10600 | 02 |
| 21 | ಹರಿಹರ | 10000/– | 100000/– | 202 | 5700 | 01 |
| 22 | ಹೊನ್ನಾಳಿ | 10000/– | 100000/– | 259 | 5400 | 01 |
| 23 | ಚನ್ನಗಿರಿ | 10000/– | 100000/– | 355 | 7500 | 02 |
| 24 | ಜಗಳೂರು | 10000/– | 100000/– | 230 | 4200 | 01 |
| 25 | ಹರಪನಹಳ್ಳಿ | 10000/– | 100000/– | 357 | 7200 | 02 |
| 26 | ಚಿತ್ರದುರ್ಗ | 10000/– | 100000/– | 433 | 9000 | 02 |
| 27 | ಚಳ್ಳಕೆರೆ | 10000/– | 100000/– | 440 | 10200 | 02 |
| 28 | ಹಿರಿಯೂರು | 10000/– | 100000/– | 380 | 6000 | 01 |
| 29 | ಹೊಳಲ್ಕೆರೆ | 10000/– | 100000/– | 269 | 4500 | 01 |
| 30 | ಮೊಳಕಾಲ್ಮೂರು | 10000/– | 100000/– | 163 | 4800 | 01 |
| 31 | ಹೊಸದುರ್ಗ | 10000/– | 100000/– | 360 | 5700 | 01 |

ಸಿ) ಶಿವಮೊಗ್ಗ ಕೇಂದ್ರ ಡೇರಿಯಿಂದ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲ ತಾಲ್ಲೂಕು ಕೇಂದ್ರಗಳಿಗೆ ಕೆನೆಭರಿತ/ಕೆನೆರಹಿತ ಹಾಲಿನ ಪುಡಿ ಸಾಗಾಣಿಕೆ ಮಾಡಲು ಈ ಕೆಳಗೆ ನಮೂದಿಸಿರುವ ಮಾರ್ಗಗಳಿಗೆ ಕವಚವನ್ನು ಹೊಂದಿರುವ ಬಾಡಿವುಳ್ಳ 2012ರ ನಂತರದ ಸಾಲಿನ ಕನಿಷ್ಠ 2 ಟನ್ ಸಾಮರ್ಥ್ಯದ ವಾಹನವನ್ನು 6 ತಿಂಗಳ ಅವಧಿಗೆ ಒದಗಿಸಲು ಗುತ್ತಿಗೆ ಕರೆಯಲಾಗಿದೆ.

| ಕ್ರ. ಸಂ | ಎಲ್ಲಿಂದ | ಎಲ್ಲಿಗೆ | ಇ.ಎಂ.ಡಿ . ರೂ. | ಭದ್ರತಾ ಠೇವಣಿ ರೂ. ಗಳಲ್ಲಿ | ಮಾಹೆಯಾನ ಅಂದಾಜು ಹಾಲಿನಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) | ವಾಹನಗಳ ಸಂಖ್ಯೆ (ಕನಿಷ್ಠ 2 ಟನ್ ಸಾಮರ್ಥ್ಯ) |
|---|---|---|---|---|---|---|
| 32 | ಶಿವಮೊಗ್ಗ ಕೇಂದ್ರ ಡೇರಿಯಿಂದ | ಶಿವಮೊಗ್ಗ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೆ<br>ದಾವಣಗೆರೆ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೆ<br>ಚಿತ್ರದುರ್ಗ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೆ | 10000 | 50,000/- | 4000 | 1 |

ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳು :- ಶಿವಮೊಗ್ಗ, ಭದ್ರಾವತಿ, ಸಾಗರ, ಶಿಕಾರಿಪುರ,ಸೊರಬ,ಹೊಸನಗರ, ತೀರ್ಥಹಳ್ಳಿ
ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳು:- ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿ, ಹರಪನಹಳ್ಳಿ, ಜಗಳೂರು
ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳು:- ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗ

**<u>ಷರತ್ತು ಮತ್ತು ನಿಬಂಧನೆಗಳು :-</u>**

1. 2012 ಮತ್ತು ನಂತರದ ಮಾಡಲ್‌ನ ಉತ್ತಮ ಸ್ಥಿತಿಯಲ್ಲಿರುವ ವಾಹನವುಳ್ಳವರು ಟೆಂಡರ್‌ನಲ್ಲಿ ಭಾಗವಹಿಸುವುದು. ಹಾಗೂ ತಾಂತ್ರಿಕ ಟೆಂಡರ್ ದಿನದಂದು ಅವಶ್ಯವಿದ್ದಲ್ಲಿ ವಾಹನಗಳನ್ನು ಪರಿಶೀಲನೆಗೆ ಒದಗಿಸುವುದು.
2. ಇ-ಪ್ರೊಕ್ಯುರ್‌ಮೆಂಟ್‌ನಡಿ ದಿನಾಂಕ:. 12.05.2015 ರ ಬೆಳಿಗ್ಗೆ 11.30 ಗಂಟೆಗೆ ತಾಂತ್ರಿಕ ಟೆಂಡರ್ (ಭಾಗ-1) ತೆರೆದು ತಾಂತ್ರಿಕ ಪರಿಶೀಲನೆ ಮಾಡಲಾಗುವುದು. ತಾಂತ್ರಿಕ ಟೆಂಡರ್ ನಂತರ ಒಕ್ಕೂಟದ ಸಭಾಂಗಣದಲ್ಲಿ ಇ-ಪ್ರೊಕ್ಯುರ್‌ಮೆಂಟ್‌ನಡಿ ವಾಣಿಜ್ಯ ಟೆಂಡರ್ (ಭಾಗ-2) ತೆರೆಯಲಾಗುವುದು.
3. ವಾಹನದ ಮಾಲೀಕರು/ಸಂಸ್ಥೆಗಳು ಒಂದೇ ವಾಹನದ ದಾಖಲೆಗಳನ್ನು ಒಂದಕ್ಕಿಂತ ಹೆಚ್ಚು ಮಾರ್ಗಗಳಿಗೆ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಇ.ಎಂ.ಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಹಾಲಿನ ಪುಡಿಯ ಸಾಗಾಣಿಕೆಯ ಮಾರ್ಗಗಳಿಗೆ, ವಾಹನ ಹೊಂದಿಲ್ಲದ ಟೆಂಡರುದಾರರು ಸಹ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿಯ ಜೊತೆಗೆ ವಾಹನ ಖರೀದಿಸಲು ಅಧಿಕೃತ ವಾಹನ ಮಾರಾಟ ಸಂಸ್ಥೆಯ ದರಪಟ್ಟಿಯನ್ನು ತಮ್ಮ ಹೆಸರಿನಲ್ಲಿ ಅರ್ಜಿದಾರರು ಪಡೆದು, ಅರ್ಜಿ ಜೊತೆ ಲಗತ್ತಿಸಿ ಸಲ್ಲಿಸುವುದು. ಟೆಂಡರ್‌ನಲ್ಲಿ ಯಶಸ್ವಿಯಾದ ಅರ್ಜಿದಾರರಿಗೆ ಸೂಚನಾ ಪತ್ರ ನೀಡಿದ ದಿನಾಂಕದಿಂದ 30 ದಿನದೊಳಗಾಗಿ ತಮ್ಮ ಹೆಸರಿನಲ್ಲಿ ಖರೀದಿಸಿದ ವಾಹನ ದಾಖಲಾತಿಗಳು ಹಾಗೂ ಇತರೆ ವಿಧಿವಿಧಾನಗಳನ್ನು ಪೂರೈಸಿ ಗುತ್ತಿಗೆ ಆದೇಶ ಪಡೆಯುವುದು, ತಪ್ಪಿದಲ್ಲಿ ಟೆಂಡರ್‌ನಲ್ಲಿ ಸಲ್ಲಿಸಿದ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೆಂದು ರೂ.200/- ರ ಛಾಪಾ ಕಾಗದದಲ್ಲಿ ವ್ಯವಸ್ಥಾಪಕ ನಿರ್ದೇಶಕರವರಿಗೆ ಮುಚ್ಚಳಿಕೆ ಪತ್ರವನ್ನು ಸಲ್ಲಿಸುವುದು.
5. ಹಾಲಿನ ಪುಡಿಯನ್ನು ಒಕ್ಕೂಟದಿಂದ ಸೂಚಿಸುವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೊತ್ತದಲ್ಲಿ ಲೋಡಿಂಗ್/ ಅನ್‌ಲೋಡಿಂಗ್ ಮೊತ್ತ ಹಾಗೂ ಅನ್ವಯಿಸುವ ಎಲ್ಲಾ ತೆರಿಗೆಗಳು ಸೇರಿರುತ್ತದೆ.
6. ಹಾಲಿನ ಪುಡಿ ಸಾಗಾಣಿಕೆ ವಿಮೆಯನ್ನು ಒಕ್ಕೂಟದಿಂದ ಮಾಡಿಸಲಾಗುವುದು.

7. ಸಾಗಾಣಿಕೆ ಬಿಲ್ಲನ್ನು ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ ಇವರ ಹೆಸರಿಗೆ ಪಾವತಿ ಕೋರಿ ಸಲ್ಲಿಸುವುದು.
8. ಹಾಲಿನ ಪುಡಿಯ ಜೊತೆಗೆ ಇತರೆ ಯಾವುದೇ ಪದಾರ್ಥಗಳನ್ನು ಸರಬರಾಜು ಮಾಡಲು ಅವಕಾಶವಿರುವುದಿಲ್ಲ
9. ಹಾಲಿನ ಪುಡಿ ಆಹಾರ ಪದಾರ್ಥವಾಗಿದ್ದು ಇದರ ಸರಬರಾಜು ಆಹಾರ ಸುರಕ್ಷತಾ ಖಾಯಿದೆಯ ಷರತ್ತುಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.
10. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಲೋಹದ ಕವಚವುಳ್ಳ ವಾಹನವನ್ನು ಒದಗಿಸುವುದು ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು.
11. ಸಾಮಾನ್ಯ ಸಂದರ್ಭಗಳಲ್ಲಿ ಗುತ್ತಿಗೆದಾರರು ಪ್ರಸ್ತುತ ವಾಹನ ಗುತ್ತಿಗೆ ಕರಾರಿನ ಪರಿ ಸಾಮಾಪ್ತಿಗೊಳಿಸುವಂತಿಲ್ಲ. ವಿಶೇಷ ಸಂದರ್ಭಗಳಾದ ಅಂದರೆ ಗುತ್ತಿಗೆದಾರರು ಮರಣ ಹೊಂದಿದಾಗ ಅಥವಾ ವಾಹನ ಅಪಘಾತಕ್ಕೀಡಾಗಿ ದುರಸ್ತಿ ಅಸಾಧ್ಯವೆಂದಾಗ ಪ್ರಸ್ತುತ ಕರಾರನ್ನು ಪರಿಸಮಾಪ್ತಿಗೊಳಿಸುವ ತಮ್ಮ ಇಂಗಿತವನ್ನು 30 ದಿನಗಳ ಸೂಚನೆಯನ್ನು ಕೊಟ್ಟು ಡೇರಿಗೆ ತಿಳಿಸತಕ್ಕದ್ದು. ಅಂತಹ ಸೂಚನೆಯನ್ನು ಒಕ್ಕೂಟವು ಪರಿಶೀಲಿಸಿ ಪ್ರತಿಶತ 50 ರವರೆಗೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆದಾರಿಕೆಯನ್ನು ರದ್ದುಪಡಿಸಲಾಗುವುದು.
12. ಸೂಚನಾಪತ್ರದಲ್ಲಿ ನಿಗದಿಪಡಿಸಿರುವಂತೆ ಸಕಾಲದಲ್ಲಿ ಗುತ್ತಿಗೆ ಆದೇಶ ಪಡೆದು ಗುತ್ತಿಗೆ ಕಾರ್ಯಗತಗೊಳಿಸಲು ವಿಫಲವಾದಲ್ಲಿ ಇ.ಎಂ.ಡಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
13. ಆಸಮರ್ಪಕ ಗುತ್ತಿಗೆ ನಿರ್ವಹಣೆ/ವಾಹನ ವಿಳಂಬ/ಕಳ್ಳತನ ಮುಂತಾದ ತಪ್ಪುಗಳಿಗೆ ಕರಾರಿನಲ್ಲಿ ತಿಳಿಸಿರುವಂತೆ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ಗುತ್ತಿಗೆದಾರಿಕೆಯನ್ನು ರದ್ದು ಪಡಿಸಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರವರು ಹೊಂದಿರತ್ತಾರೆ.
14. ಯಶಸ್ವಿಯಾದ ಗುತ್ತಿಗೆದಾರರು ಕಡ್ಡಾಯವಾಗಿ ಎರಡು ಭಾವಚಿತ್ರ, ವೃತ್ತಿ ತೆರಿಗೆ ನೋಂದಣಿ ಹಾಗೂ ಆದಾಯ ತೆರಿಗೆ ಪಾನ್ ಕಾರ್ಡ್ ಮಾಡಿಸಿ ಗುತ್ತಿಗೆ ಕೆಲಸದ ಆದೇಶವನ್ನು ಪಡೆಯುವಾಗ ಒಕ್ಕೂಟದಲ್ಲಿ ಗುತ್ತಿಗೆ ಪಡೆದ ಎರಡು ಸಾಕ್ಷಿದಾರರ ಭಾವಚಿತ್ರವನ್ನು ಸಹಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
15. ಮೇಲಿನ ನಿಬಂಧನೆಗಳಲ್ಲದೇ ಕಾಲ ಕಾಲಕ್ಕೆ ಸರ್ಕಾರ/ಒಕ್ಕೂಟವು ಹೊರಡಿಸುವ ನಿಯಮಗಳೇನಾದರೂ ಬಂದಲ್ಲಿ ತಮಗು ಆಳವಡಿಸಲಾಗುವುದೆಂದು ತಿಳಿಯತಕ್ಕದ್ದು.
16. ಯಾವುದಾದರೂ ತಂಟೆ ತಕರಾರುಗಳ ಉಂಟಾದಲ್ಲಿ ಸ್ಥಳೀಯ ಶಿವಮೊಗ್ಗ ನ್ಯಾಯಾಲಯದಲ್ಲಿ ಮಾತ್ರ ಪ್ರಶ್ನಿಸಿ ಬಹುದಾಗಿರುತ್ತದೆ.

ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಫಾರಂನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246344**

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ., ಶಿವಮೊಗ್ಗ.

ದಿನಾಂಕ : 09.04.2015
ಸ್ಥಳ : ಶಿವಮೊಗ್ಗ ಡೇರಿ